**ಸಾಕ್ಷಿಯನ್ನು ದಿಃ24.03.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನನಗೆ ಓದಲು ಬರೆಯಲು ಬರುವುದಿಲ್ಲ.
2. ಯಾರು ಯಾರ ಮೇಲೆ ದಾವೆ ಹಾಕಿದ್ದಾರೆ ಎಂದರೆ ಕೃಷ್ಣನಾಯಕ ರವರ ಮೇಲೆ ಯೋಗೇಶ ಹಾಕಿದ್ದಾರೆ.
3. ವಾದಿಯು ಯಾವ ಕಾರಣಕ್ಕೆ ದಾವೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಯಾವ ಸ್ವತ್ತಿನ ಮೇಲೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚಕ್ಕುಬಂದಿ ನನಗೆ ಗೊತ್ತಿಲ್ಲ.
4. ವಾದಿ ಎಷ್ಟು ವರ್ಷದಿಂದ ನಿಮಗೆ ಪರಿಚಯ ಎಂದರೆ, 5-6 ವರ್ಷದಿಂದ ಪರಿಚಯ.
5. ನಿಮಗೆ ಹಾಗೂ ವಾದಿಗೆ ಹಣಕಾಸಿನ ವ್ಯವಹಾರ ಇತ್ತು ಎಂದರೆ ಸರಿಯಲ್ಲ.
6. ವಾದಿಯು ನಿಮ್ಮ ಮೇಲೆ ಇದೇ ನ್ಯಾಯಾಲಯದಲ್ಲಿ ಅ.ದಾ.ನಂ.37/2018 ರಂತೆ ಪ್ರೊನೋಟ್ ಮೇಲೆ ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಿಮ್ಮ ವಕೀಲರು ಯಾರು ಎಂದರೆ ನನಗೆ ಗೊತ್ತಿಲ್ಲ.
7. ಸದರಿ ದಾವೆಯಲ್ಲಿ ನೀವು ಹಾಗೂ ವಾದಿ ರಾಜಿ ಮಾಡಿಕೊಂಡಿದ್ದೀರಿ ಎಂದರೆ ಸರಿ. ಎಷ್ಟಕ್ಕೆ ರಾಜಿ ಮಾಡಿಕೊಂಡಿದ್ದೀರಿ ಎಂದರೆ, ನಾನು 25 ಸಾವಿರ ಹಣ ಕೊಡಬೇಕಿತ್ತು ಅದನ್ನು ಕೊಟ್ಟು ರಾಜಿ ಮಾಡಿಕೊಂಡಿದ್ದೇವೆ.
8. ಸದರಿ ದಾವೆಯಲ್ಲಿ ನೀವು ಹಣ ನೀಡದ ಕಾರಣ ಅವರು ನಿಮ್ಮ ಮೇಲೆ ಅಮಲ್ಜಾರಿ ಪ್ರಕರಣ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ನನ್ನ ಮಗನಿಗೆ ಕೇಳಬೇಕು.
9. ನಿಮಗೆ ಈ ದಾವೆಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಪ್ರತಿವಾದಿ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
10. ಪ್ರತಿವಾದಿಯು 4 ಲಕ್ಷ 50 ಸಾವಿರ ಹಣವನ್ನು ಪಡೆದು ವಾದಿಗೆ ಮನೆಯ ಬಗ್ಗೆ ಕರಾರು ಪತ್ರ ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.
11. ನೀವು ವಾದಿಗೆ ಹಣ ಕೊಡಬೇಕಾದ ಕಾರಣ ಅವರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ